International Journal of Kannada Research 2022; 8(4): 88-91




International Journal of Kannada Research
www.kannadajournal.com

**ISSN: 2454–5813**
IJKR 2022; 8(4): 88-91
© 2022 IJKR
www.kannadajournal.com
Received: 06-08-2022
Accepted: 09-09-2022

**ಡಾ. ಎಂ ಚಿಕ್ಕಣ**
ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರು,
ಕನ್ನಡ ಭಾಷಾ ವಿಭಾಗ,
ಎಸ್.ಡಿ.ಯು.ಐ.ಎಂ.,
ದೊಡ್ಡಬಳ್ಳಾಪುರ, ಕರ್ನಾಟಕ,
ಭಾರತ

**Corresponding Author:**
**ಡಾ. ಎಂ ಚಿಕ್ಕಣ**
ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರು,
ಕನ್ನಡ ಭಾಷಾ ವಿಭಾಗ,
ಎಸ್.ಡಿ.ಯು.ಐ.ಎಂ.,
ದೊಡ್ಡಬಳ್ಳಾಪುರ, ಕರ್ನಾಟಕ,
ಭಾರತ

# ಕನ್ನಡ ಚಲನಚಿತ್ರಗಳಲ್ಲಿ ಜಾನಪದ ಕಲೆ

**ಡಾ. ಎಂ ಚಿಕ್ಕಣ**

**ಚಲನಚಿತ್ರ:** ಚಲನಚಿತ್ರ ಎಂದರೆ ಚಿತ್ರವನ್ನು ನಿರ್ಮಿಸುವ ಪ್ರಕ್ರಿಯೆ. ಈ ಪ್ರಕ್ರಿಯೆ, ಹಲವಾರು ಹಂತಗಳನ್ನು ಹೊಂದಿರುತ್ತದೆ: ಪ್ರಮುಖವಾಗಿ ಚಿತ್ರ ಕಥೆ ಹಾಗೂ ಕಲ್ಪನೆಯ ಮೂಲಕ ಲಿಪಿ ಪ್ರತಿ, ಪಾತ್ರದಾರಿಗಳ ಛಾಯಾಚಿತ್ರಗಾರಿಕೆ, ಸಂಪಾದನೆ, ಚಿತ್ರ ಬಿಡುಗಡೆ, ಕೇಳುಗರ ಮುಂದೆ ಪ್ರದರ್ಶಿಸುವುದನ್ನು ಒಳಗೊಂಡಿರುತ್ತದೆ. ಚಲನಚಿತ್ರವನ್ನು ಪ್ರಪಂಚದ ಹಲವಾರು ಸ್ಥಳಗಳಲ್ಲಿ, ವಿವಿಧ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಕೋನಗಳಲ್ಲಿ, ವೈವಿಧ್ಯಮಯ ತಂತ್ರಜ್ಞಾನಗಳ ಮತ್ತು ಸಿನಿಮೀಯ ತಂತ್ರಗಳ ಬಳಕೆಯಿಂದ ನಿರ್ಮಾಣ ಮಾಡಲಾಗುವುದು. ಸೂಚಕವಾಗಿ, ಚಲನಚಿತ್ರ ನಿರ್ಮಾಣ ಒಂದು ದೊಡ್ಡ ಸಂಸ್ಥೆಯನ್ನು ಒಳಗೊಂಡಿರುತ್ತದೆ. ಒಂದು ಚಿತ್ರವನ್ನು ಪೂರ್ಣಗೊಳಿಸಲು ಅನೇಕ ತಿಂಗಳಿಂದ ಹಿಡಿದು ಕೆಲವು ವರ್ಷಗಳ ಕಾಲ ತೆಗೆದುಕೊಳ್ಳುವ ಒಂದು ಪ್ರಕ್ರಿಯೆ ಎನ್ನಬಹುದು.

ಜಾನಪದ: ಜಾನಪದ ಎನ್ನುವ ಪದ ಇಂಗ್ಲೀಷಿನಲ್ಲಿ 'Folklore' ಎಂಬುದಕ್ಕೆ ಸಮಾನಾರ್ಥಕವಾಗಿ ಬಳಸಿರುವ ಕನ್ನಡ ಪದ. Folklore ಎನ್ನುವುದು Folk & Lore ಎಂಬ ಎರಡು ಪ್ರತ್ಯೇಕ ಅರ್ಥವನ್ನು ಉಳ್ಳ ಪದಗಳ ಸಯೋಗದಿಂದ ಕೂಡಿದೆ. ಈಂಟಇ ಎನ್ನುವುದಕ್ಕೆ ಕನ್ನಡದಲ್ಲಿ ಜನಪದ ಎಂತಲೂ, ಐಂಡಿಜ ಜ್ಞಾನ ಎಂತಲೂ ಇದೆ. ಜಾನಪದ ಜ್ಞಾನ ಈ ವಿಷಯಕ್ಕೆ ಡಾ. ಹಾ.ಮಾ. ನಾಯಕ ಅವರು ಜಾನಪದ ಎಂಬ ಶಬ್ದವನ್ನು ಬಳಸಿದ್ದಾರೆ.

ಜಾನಪದ ಎಂಬುದಕ್ಕೆ ಹಾ. ಮಾ.ನಾಯಕ ಅವರು ಜಾನಪದ ಲಿಖಿತ ದಾಖಲೆಗಿಂತ ಜನತೆಯ ಗ್ರಂಥಸ್ಥವಲ್ಲದ ಸಾಂಪ್ರದಾಯಿಕ ಮೊತ್ತ. ಸಂಪ್ರದಾಯವನ್ನು ಕುರಿತಾದ ವಿಜ್ಞಾನ ಯಾವುದೇ ಸಮಾಜದ ವಾಚಿಕ ಪರಂಪರೆಗಳ ಕಲೆ ಮತ್ತು ನಂಬಿಕೆಗಳ ಮೊತ್ತ ಎಂದರೆ,ಜಿ.ಶಂ.ಪರಮಶಿವಯ್ಯ ಅವರು ನಾಗರಿಕತೆಗೂ ಮೂಲವಾದ ಶಿಷ್ಟ ಸಂಸ್ಕೃತಿಯಿಂದ ದೂರವಾದ ಪರಂಪರಾನುಗತವಾದ ಬೆಳವಣಿಗೆಗಳು ಪಡೆದ ಜನಸಮುದಾಯದ ವಿಶಿಷ್ಟ ಸಂಸ್ಕೃತಿಯೇ ಜಾನಪದ ಎಂದಿದ್ದಾರೆ.

ಜನಪದ ಗೀತೆಗಳ ಮೂಲಧಾಟಿಗಳು ಇತ್ತೀಚಿನ ದಿನಮಾನಗಳಲ್ಲಿ ವಿಜ್ಞಾನ–ತಂತ್ರಜ್ಞಾನ, ವೈಜ್ಞಾನಿಕ ಕಾರಣಗಳಿಂದ ಇಂದು ಜನಪದ ಗೀತೆಗಳು ತನ್ನ ಮೂಲ ಸತ್ವವನ್ನು ಉಳಿಸಿಕೊಳ್ಳುತ್ತಿರುವುದು ಒಂದು ಕಡೆಯಾದರೆ, ಚಲನಚಿತ್ರಗಳು ಜನಪದ ಗೀತೆಗಳಿಗೆ ಜೀವ ತುಂಬುವ ಕೆಲಸವನ್ನು ಮಾಡುತ್ತಿರುವುದು ಇನ್ನೊಂದು ಕಡೆ ನಡೆಯುತ್ತಿದೆ.

ಆಧುನಿಕತೆ ಇಂದು ಮಾನವೀಯತೆಯ ಇತಿಹಾಸ ಮತ್ತು ವರ್ತಮಾನದ ಇತಿಹಾಸಕ್ಕೆ ನಿರ್ಣಾಯಕವಾಗಿದೆ ಮತ್ತು ಅದು ಇಂದು ನಾವು ಇರುವ ಸ್ಥಾನದಲ್ಲಿರಲು ಅನುವು ಮಾಡಿಕೊಡುತ್ತದೆ, ಅದು ಹೊರಹೊಮ್ಮಿದ ಸಮಯದಿಂದ ಇಂದಿನವರೆಗೆ ಅದರ ಅಭಿವೃದ್ಧಿಯಲ್ಲಿ; ವಿಜ್ಞಾನದಿಂದ ಕಲೆಗೆ, ಕ್ರೀಡೆಯಿಂದ, ಸಾಹಿತ್ಯದವರೆಗೆ ಪ್ರತಿಯೊಂದು ಕ್ಷೇತ್ರದಲ್ಲೂ ಇದು ಮುಖ್ಯ ರೂಪಿಸುವ ಅಂಶಗಳಲ್ಲಿ ಒಂದಾಗಿದೆ.

ಆಧುನಿಕತೆಯ ಕಾಲದಲ್ಲಿ ಹೊರಹೊಮ್ಮಿದ ಮತ್ತು ಹೆಚ್ಚಿನ ಜನಸಾಮಾನ್ಯರನ್ನು ತಲುಪುವಲ್ಲಿ ಪ್ರಮುಖ ಸಾಮರ್ಥ್ಯವನ್ನು ಹೊಂದಿರುವ ಚಲನಚಿತ್ರ, ಮಾನಸಿಕತೆಯನ್ನು ಭೇದಿಸುವುದಕ್ಕೆ ಒಂದು ಪ್ರಮುಖ ಸಾಧನವಾಗಿದೆ ಮತ್ತು ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆಗಳೊಂದಿಗೆ ಅದರ ಪ್ರಭಾವದ ಪ್ರದೇಶ ಮತ್ತು ವಿಧಾನಗಳನ್ನು ಅಭಿವೃದ್ಧಿಪಡಿಸಿದೆ. ಸಾಂಸ್ಕೃತಿಕ ಮತ್ತು ತಾಂತ್ರಿಕ ಕ್ರಾಂತಿಗಳ ಪರಿಣಾಮವಾಗಿ ಈಗಿನ ಸ್ಥಿತಿಗೆ ತಲುಪಿದೆ.

ನಮ್ಮ ದೇಶದಲ್ಲೇ ಕರ್ನಾಟಕದ ಜಾನಪದ ಸಂಸ್ಕೃತಿ ಅತ್ಯಂತ ಶ್ರೀಮಂತವಾಗಿದೆ ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ. ಕಲೆ, ಸಾಹಿತ್ಯ, ನೃತ್ಯ,ಅಂದರೆ ಡೊಳ್ಳು ಕುಣಿತ, ಕಂಸಾಳೆ, ಕರಡಿ ಮಜಲು, ವೀರಗಾಸೆ, ನಂದಿಕೋಲು ಕುಣಿತ, ಇತ್ಯಾದಿ,

ನಾಟಕಗಳಾದ ಬಯಲಾಟ, ದೊಡ್ಡಾಟ, ಶ್ರೀ ಕೃಷ್ಣಪಾರಿಜಾತ, ಯಕ್ಷಗಾನ ಮುಂತಾದ ವಿವಿಧ ಪ್ರಕಾರಗಳನ್ನು ನಮ್ಮ ಕನ್ನಡ ಜಾನಪದ ಸಂಸ್ಕೃತಿಯಲ್ಲಿ, ಚಲನಚಿತ್ರಗಳಲ್ಲಿ ಕಾಣಬಹುದು.

ಕನ್ನಡ ಜಾನಪದ ಸಂಸ್ಕೃತಿಯ ಒಂದು ಭಾಗವಾದ ಜಾನಪದ ಗೀತೆಗಳು ಮತ್ತು ಚಲನಚಿತ್ರಗಳು ಅತ್ಯಂತ ವೈವಿಧ್ಯಮಯವಾಗಿ ಕನ್ನಡ ನಾಡಿನ ವಿವಿಧ ಪ್ರದೇಶಗಳ ಪ್ರಾದೇಶಿಕ ಸೊಗಡುಗಳನ್ನು ನಮ್ಮ ಮುಂದಿನ ಪೀಳಿಗೆಗೆ ಜೋಪಾನ ಮಾಡಿವೆ.

ಇಂದಿನ ಪಾಶ್ಚಾತ್ಯ ಶೈಲಿಯ ಸಂಗೀತದ ಮಧ್ಯೆ ಜಾನಪದ ಗೀತೆಗಳು ಮತ್ತು ಚಲನಚಿತ್ರಗಳು ತನ್ನ ಹಿಂದಿನ ವೈಭವವನ್ನು ಸ್ವಲ್ಪಮಟ್ಟಿಗೆ ಬದಲಾವಣೆಮಾಡಿ ಕೊಂಡಿವೆ ಎಂದೆನಿಸಿದರೂ ತನ್ನ ಮೂಲ ನೆಲೆಯಾದ ಹಳ್ಳಿಗಳಲ್ಲಿ , ಜಾನಪದ ಕಲೆ ಇನ್ನೂ ಉಳಿದುಕೊಂಡಿರುವುದು ಸಮಾಧಾನದ ವಿಷಯವಾಗಿದೆ.

ಪಾಶ್ಚಾತ್ಯ ಸಂಗೀತಗಳ ಪ್ರವೇಶದಿಂದ ಜಾನಪದ ಗೀತೆಗಳನ್ನ ಚಲನಚಿತ್ರಗಳಲ್ಲಿ ಬಳಕೆ ಮಾಡುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದಾರೆ, ಆದರೆ ಚಲನಚಿತ್ರಗಳಲ್ಲಿ ಜಾನಪದ ಗೀತೆಗಳನ್ನು, ಸಾಂಸ್ಕೃತಿಕ ಅಂಶಗಳನ್ನು, ಬಳಸಿಕೊಳ್ಳುವುದರ ಮುಖೇನ ತನ್ನ ನೆಲೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು ಸಮಾಧಾನದ ಸಂಗತಿಯಾಗಿದೆ. ಉದಾಹರಣೆಗೆ ರಿಷಬ್ ಶೆಟ್ಟಿ ನಾಯಕ ನಟನಾಗಿ ಅಭಿನಯಿಸಿರುವ ಕಾಂತಾರ ಸಿನಿಮಾ, ಶಿವರಾಜ್ ಕುಮಾರ್ ಅವರ ಜನುಮ ಜನುಮದ ಜೋಡಿ, ರಾಜಕುಮಾರ್ ಬಂಗಾರದ ಮನುಷ್ಯ, ಹಗಲು ವೇಷ, ಮುಂತಾದ ಚಲನಚಿತ್ರಗಳಲ್ಲಿ ಕಾಣಸಿಗುವ ಜಾನಪದೀಯ ಆಚರಣೆಗಳು.

ಕನ್ನಡದಲ್ಲಿ ಜನಪದ ಮತ್ತು ಜಾನಪದ ಎಂಬ ಎರಡು ಪದಗಳು ಬಳಕೆಯಲ್ಲಿದ್ದು ಎರಡು ಪದಗಳಿಗೆ ಪ್ರತ್ಯೇಕ ಅರ್ಥವಲಯವಿದೆ,

ಈ ಅಂಶವನ್ನು ಡಾ. ಹಾ.ಮಾ.ನಾಯಕರು ತಮ್ಮ 'ಜಾನಪದ ಸ್ವರೂಪ' ಎಂಬ ಕಿರುಹೊತ್ತಿಗೆಯಲ್ಲಿ ವಿಷದ ಪಡಿಸಿದ್ದಾರೆ, ಸರಳವಾಗಿ ಹೇಳುವುದಾದರೆ 'ಜನಪದ' ಎನ್ನುವುದು ಬಿಡಿಬಿಡಿಯಾದ ಅಂಶಗಳಿಗೂ 'ಜಾನಪದ' ಎನ್ನುವುದು ಇಡಿಯಾದ ವಿಭಾಗಕ್ಕೂ ಅನ್ವಯಿಸುತ್ತದೆ, ಜನಪದ ಗೀತೆ, ಜನಪದ ಕಲೆ,ಜನಪದ ಸಾಹಿತ್ಯ, ಜನಪದ ಆಚರಣೆ ಹೀಗೆ ಬಿಡಿಯಾದ ಅಂಗಗಳಿಗೆ 'ಜನಪದ' ಎಂಬ ಪದ ಬಳಕೆಯಾದರೆ ಜನಪದದ ಎಲ್ಲವನ್ನೂ ಒಳಗೊಂಡ ಸಮಗ್ರ ಘಟಕವು 'ಜಾನಪದ' ಎನಿಸಿಕೊಳ್ಳುತ್ತದೆ. 'ಜಾನಪದ'ದಲ್ಲಿ ಸಾಹಿತ್ಯ, ಕಲೆ, ಆಟ, ಹಬ್ಬ, ಆಚರಣೆ ಎಲ್ಲವೂ ಸೇರುತ್ತವೆ.

ಜನರ ಬಾಯಿಂದ ಬಾಯಿಗೆ ಹರಿದಾಡುವ ಸಾಹಿತ್ಯವನ್ನು ಜನಪದ ಎಂದು ಕರೆಯುತ್ತೇವೆ. ಜನಪದ ಕಲೆಗಳಲ್ಲಿ ಪರಂಪರೆಯು ಮೇಲುಗೈ ಪಡೆದಿರುತ್ತದೆ, ಸಾಮಾನ್ಯವಾಗಿ ಅನಕ್ಷರಸ್ಥರು ಬಯಲಾಟ ಅಥವಾ ದೊಡ್ಡಾಟ, ಕೋಲಾಟ, ಸುಗ್ಗಿ ಕುಣಿತ, ಡೊಳ್ಳು ಕುಣಿತದ ಕಲೆಗಳಲ್ಲಿ ತೊಡಗಿಕೊಂಡಿರುತ್ತಾರೆ.

ಆದರೆ 'ಜನಪದ'ವು ಎಲ್ಲವೂ ಸೇರಿದ ಪದವಾಗಿ ಬಳಕೆಯಾಗುವುದಿಲ್ಲ, ಅಂತೆಯೇ ಗೀತೆ, ಸಾಹಿತ್ಯ, ಕಲೆ, ಇವುಗಳ ಹಿಂದೆ 'ಜಾನಪದ' ಎಂದು ಸೇರಿಸುವುದು ಸರಿಯಲ್ಲ.ಅವುಗಳ ಹಿಂದೆ 'ಜನಪದ' ಎಂದು ಸೇರಿಸಿ ಜನಪದ ಗೀತೆ, ಜನಪದ ಸಾಹಿತ್ಯ, ಜನಪದ ಕಲೆ ಎಂದು ಹೇಳುವುದು ಸರಿಯಾದ ಕ್ರಮ ಎನ್ನಬಹುದು.

ಆದರೆ ಆಧುನಿಕತೆಯ ಭರಾಟೆಯಲ್ಲಿ ಜನಪದ ಗೀತೆಗಳ ಮೂಲ ಧಾಟಿಗಳಲ್ಲಿ ಬದಲಾವಣೆ ಮಾಡಿಕೊಂಡು ಚಲನಚಿತ್ರಗಳಲ್ಲಿ ಅವುಗಳನ್ನು ಉಳಿಸುವ, ಬೆಳೆಸುವ ಮತ್ತು ಯುವ ಜನಾಂಗಕ್ಕೆ ಅವುಗಳನ್ನು ತಲುಪಿಸುವ ಕಾರ್ಯ ಚಲನಚಿತ್ರಗಳ ಮುಖೇನ ನಡೆಯುತ್ತಿದೆ ಎಂದರೆ ಸೋಜಿಗವಲ್ಲ, ಈ ರೀತಿಯ ಪ್ರಯತ್ನಗಳು ಇನ್ನಷ್ಟು ಸಾಮಾಜಿಕ ಜಾಲತಾಣಗಳ ಮುಖೇನ, ಸಿನಿಮಾಗಳ, ಧಾರವಾಹಿಗಳ ಮುಖೇನ ನಡೆಯಬೇಕಾಗಿದೆ.

ಮೂಲ ಜಾನಪದ ದಾಟಿಗಳನ್ನು ಚಲನಚಿತ್ರಗಳು, ಧಾರವಾಹಿಗಳು ಬಳಸಿಕೊಂಡು ಸ್ವತಂತ್ರ ಗೀತೆಗಳನ್ನು ರಚಿಸಿ, ಅವುಗಳನ್ನು ಧಾರಾವಾಹಿಗಳಲ್ಲಿ, ಸಿನಿಮಾಗಳಲ್ಲಿ ಬಳಕೆ ಮಾಡುತ್ತಿದ್ದಾರೆ

**ಉದಾಹರಣೆಗೆ:**

ಭಾಗ್ಯದ ಬಳೆಗಾರ ಹೋಗಿ ಬಾ ನನ್ ತವರಿಗೆ
'ನಿನ್ನ ತವರೂರಾ ನಾನೇನು ಬಲ್ಲೆನು
ಗೊತ್ತಿಲ್ಲ ಎನಗೆ ಗುರಿಯಿಲ್ಲ ಎಲೆಬಾಲೆ
ತೋರಿಸು ಬಾರೆ ತವರೂರ,
ಭಾಗ್ಯದ ಬಳೆಗಾರ ಹೋಗಿ ಬಾ ನನ್ ತವರೀಗೇ
ಬಾಳೆ ಬಲಕ್ಕೆ ಬೀಡು ಸೀಬೆ ಎಡಕ್ಕ ಬೀಡು
ನಟ್ಟ ನಡುವೇಲ್ಲಿ ನೀ ಹೋಗು ಬಳೆಗಾರ
ಅಲ್ಲಿಹುದೆನ್ನಾ ತವರೂರ.

'ಭಾಗ್ಯದ ಬಳೆಗಾರ' ಶೀರ್ಷಿಕೆಯ ಈ ಸಿನಿಮಾವನ್ನು ಶಿವರಾಜ್ ಕುಮಾರ್ ನಾಯಕ ನಟನಾಗಿ ಅಭಿನಯ ಮಾಡಿರುತ್ತಾರೆ, ಈ ಚಲನಚಿತ್ರದಲ್ಲಿ ಇಳೆಯರಾಜ ಅವರು ಈ ಜನಪದ ಗೀತೆಗೆ ಹೊಸ ರೂಪ ಕೊಟ್ಟು ಜಾನಪದೀಯ ಕಲೆ, ಜನಪದೀಯ ಅಂಶಗಳು ಸಮಾಜದಲ್ಲಿ ಉಳಿಯಲು ಮತ್ತು ಬೆಳೆಯಲು ಒಂದು ಹೊಸ ರೂಪ ಕೊಟ್ಟು ವಿಭಿನ್ನ ಶೈಲಿಯಲ್ಲಿ ಹಾಡಿರುವುದು, ನಟನೆ ಮಾಡಿರುವುದು ಒಂದು ವಿಶೇಷತೆ ಎನ್ನಬಹುದು.

ಮೂಲ ಜನಪದ ಗೀತೆಯ ಭಾಗ್ಯದ ಬಳೆಗಾರ ಗೀತೆಯ ದಾಟಿಗೂ ಚಲನಚಿತ್ರದಲ್ಲಿ ಹಾಡಿರುವ ಇಳಿಯರಾಜ ರವರ ದಾಟಿಗೂ ವ್ಯತ್ಯಾಸವಿದೆ, ಜನಪದ ಗೀತೆಗಳು ಇಂದು ತಮ್ಮ ಮೂಲ ಸತ್ವವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಆದರಲ್ಲೂ ಯುವಜನಾಂಗಕ್ಕೆ ಇವುಗಳನ್ನು ಪರಿಚಯಿಸುವ ಒಂದು ಪ್ರಯತ್ನ ಚಲನಚಿತ್ರಗಳ ಮುಖೇನ ನಡೆಯುತ್ತಿದೆ ಎನ್ನುವುದು ಸಮಾಧಾನದ ಸಂಗತಿ.

"ಜರಾಸಂಧ" ಚಲನಚಿತ್ರದಲ್ಲಿ ಬರುವ "ನೀ ನೀರಿಗೆ ಬಾರೇ" ಜನಪದ ಗೀತೆಯು ಚಲನಚಿತ್ರದಲ್ಲಿ ತಂತ್ರಜ್ಞಾನದ ಬಳಕೆ, ವೇಷಭೂಷಣಗಳ ಆಡಂಬರ ಮತ್ತು ಆಧುನಿಕತೆಯ ಸ್ಪರ್ಶದೊಂದಿಗೆ ವಿಭಿನ್ನ

ರೀತಿಯಲ್ಲಿ ಕಾಣಬಹುದು ಅದು ಈ ರೀತಿಯಾಗಿದೆ:
ನೀ ನೀರಿಗೆ ಬಾರೇ.....
ಚೆನ್ನಿ ಬಿಂದ್ಗೆಹಿಡ್ಕೊಂಡು
ನೀ ನೀರಿಗೆ ಬಾರೆ ಚೆನ್ನಿ
ಬಿಂದ್ಗೆ ಹಿಡ್ಕೊಂಡು
ನಾ ನೋಡಕ್ ಬತ್ತೀನ್ ನಿನ್ನ
ಹಸವ ಹೊಡ್ಕೊಂಡು.

ಈ ಗೀತೆಯನ್ನ ಅರ್ಜುನ್ ಜನ್ಯ ಮತ್ತು ಶಮಿತ ಮಲ್ನಾಡ್ "ಜರಾಸಂದ" ಚಲನಚಿತ್ರದಲ್ಲಿ ಯುವ ಪೀಳಿಗೆಯನ್ನು ತಮ್ಮತ್ತ ಸೆಳೆಯುವ ರೀತಿಯಲ್ಲಿ ಹಾಡಿರುತ್ತಾರೆ.

ಜಾನಪದ ಮತ್ತು ಆಧುನಿಕತೆಯನ್ನು ಎದುರುಬದುರಾಗಿ ನಿಲ್ಲಿಸುವ ಪ್ರಯತ್ನ ಇಲ್ಲಿ ಕಾಣಬಹುದು. ನನ್ನ ದೃಷ್ಟಿಯಲ್ಲಿ ಆಧುನಿಕತೆ ಎನ್ನುವುದು ಎಲ್ಲ ಕಾಲದಲ್ಲೂ ಇರುವ ವಿಕಾಸದ ಹಂತ ಎನ್ನಬಹುದು ಬೆಂಕಿ, ಎತ್ತಿನ ಬಂಡಿ, ಕಾಡಿನಿಂದ ನಾಡಿಗೆ ಪಾದಾರ್ಪಣೆ ಮಾಡಿದಾಗ, ವೈಜ್ಞಾನಿಕ ಆವಿಷ್ಕಾರಗಳು, ಗುಡಿಸಲುಗಳಿಂದ ಹಂಚಿನ ಮನೆಗಳಿಗೆ ಬಂದಾಗ, ಹಂಚಿನ

ಮನೆಯೇ ಆಧುನಿಕ ಎಂದು ಭಾವಿಸಿದ್ದೆವು, ಅಂದಂದಿನ ಜೀವನ ವಿಧಾನ ಉತ್ಪಾದನೆಯ ಸಾಧನಗಳ ಒಟ್ಟು ಪರಿಣಾಮ, ಅದರ ಫಲವಾಗಿ ಅವಕ್ಕೆ ತಕ್ಕಂತೆ ಕಥೆ, ಗೀತೆ, ಆಚರಣೆಗಳು ರೂಪ ತಾಳಿ ಜೀವನ ವಿಧಾನ ಬದಲಾದಂತೆ, ಜಾನಪದ ಎಂದು ನಾವು ಕರೆದು ಜಾನಪದಕ್ಕೆ ಆಧುನಿಕ ಮುಖವಿಲ್ಲವೆಂದು ಭಾವಿಸುವ ಕಾಲ ಹೋಯ್ತು , ಈಗ ಜಾನಪದ ಸಾಹಿತ್ಯಕ್ಕೆ ಹೊಸ ಆಯಾಮ ಸೃಷ್ಟಿಯಾಗಿದೆ ಕಥೆಯಾಗಿರಬಹುದು, ಗೀತೆಯಲ್ಲಿ ಆಗಿರಬಹುದು, ಆಚರಣೆಯಲ್ಲಿ ಆಗಿರಬಹುದು, ನಟನೆಯಲ್ಲಿ ಆಗಿರಬಹುದು ವೇಷಭೂಷಣದಲ್ಲಿ ಆಗಿರಬಹುದು, ಪ್ರತಿಯೊಂದಕ್ಕೂ ಒಂದು ಆಧುನಿಕತೆಯ ಸ್ಪರ್ಶ ಮಿಳಿತ ಸಿಗುತ್ತಿರುವುದು ನಾವು ಕಾಣುತ್ತಿದ್ದೇವೆ, ಅಂದರೆ ಜಾನಪದ ಕಲೆಗಳು ನಶಿಸಿ ಹೋಗುವ ಈ ಕಾಲಘಟ್ಟದಲ್ಲಿ ಅವುಗಳಿಗೆ ಒಂದು ಹೊಸ ರೂಪವನ್ನು ಚಲನಚಿತ್ರಗಳು ಕೊಡುತ್ತಿರುವ ಕಾಲಘಟ್ಟವನ್ನು ಕಾಣುತ್ತಿದ್ದೇವೆ.

ರೇಡಿಯೋ ಕಾಲ ಮುಗಿಯಿತು ಅನ್ನುತ್ತಿದ್ದ ಕಾಲ ಒಂದಿತ್ತು ಆದರೆ ಈಗ ಆಕಾಶವಾಣಿಗೆ ಒಂದು ಹೊಸ ರೂಪ ದೊರೆತಿರುವುದು ನಮ್ಮ ಕಣ್ಮುಂದೆ ಕಾಣುತ್ತಿದ್ದೇವೆ, ನೋಡುತ್ತಿದ್ದೇವೆ,ಆಕಾಶವಾಣಿಯನ್ನು ಉಳಿಸಿಕೊಂಡಿರುವುದು ಮತ್ತು ಜನರು ಆ ಕಡೆ ಹೆಚ್ಚು ಒಲವು ತೋರಿಸಿರುವುದು ನಮ್ಮ ಕಣ್ಮುಂದಿದೆ.

ಹಾಗೆಯೇ ಜಾನಪದ ನೃತ್ಯ, ಕಲೆ, ಕುಣಿತ, ಕೋಲಾಟ ಬಯಲಾಟ, ದೊಂಬರಾಟ ಈ ರೀತಿಯ ಕಲೆಗಳಿಗೆ ಒಂದು ಹೊಸ ರೂಪ ಕೊಡುತ್ತಿರುವುದು ಚಲನಚಿತ್ರ ಗಳಲ್ಲಿ ಎಂಬುದನ್ನ ನಾವು ಗಮನಿಸುತ್ತಿದ್ದೇವೆ, ಚಲನಚಿತ್ರಗಳಲ್ಲಿ ಲಿಖಿತ, ಮೌಖಿಕ ಮತ್ತು ವೈಜ್ಞಾನಿಕತೆಯ ಭಿನ್ನ ನೆಲೆಗಳನ್ನು ಅಳವಡಿಸಿಕೊಳ್ಳುತ್ತಿರುವುದು ಗಮನಿಸುತ್ತಿದ್ದೇವೆ,

**ಉದಾಹರಣೆಗೆ:–**

'ಜರಾಸಂಧ' ಸಿನಿಮಾ 'ಭಾಗ್ಯದ ಬಳೆಗಾರ', 'ಜನುಮದ ಜೋಡಿ', 'ಹಗಲುವೇಷ' ಮುಂತಾದ ಚಲನಚಿತ್ರಗಳಲ್ಲಿ ಜಾನಪದೀಯ ಅಂಶಗಳು ಮತ್ತು ಆಧುನಿಕತೆಯ ವಿಚಾರಗಳು ಮತ್ತು ವಿಜ್ಞಾನ ತಂತ್ರಜ್ಞಾನ ಮತ್ತು ವೈಜ್ಞಾನಿಕ ಪ್ರಯೋಗಗಳು ಮಿಳಿತಗೊಂಡಿರುವುದು ನಮಗೆ ಗೋಚರವಾಗುತ್ತದೆ.

**ರೈತರು ಮತ್ತು ಜನಪದ ಗೀತೆಗಳು**

ತಡವಾಗಿ ಆಗಮಿಸಿದೆ ಮುಂಗಾರು ಮಳೆ. ಜಗದ ಎಲ್ಲೆಡೆಗೂ ವರುಣನ ಸ್ಪರ್ಶ ಇನ್ನೂ ಆಗಬೇಕಿದೆ. ಮುಗಿಲತ್ತ ಕಣ್ಣಿಟ್ಟು ಕುಳಿತ ರೈತರ ಕಾಯುವಿಕೆಯೂ ನಿರಂತರವಾಗಿದೆ. ಮಳೆ ಬಂದಾಗ ಆಗುವ ಖುಷಿಗೂ, ಅದಕ್ಕಾಗಿ ಕಾದು ನೊಂದ ಬೇನೆಗೂ ಜನಪದ ಗೀತೆಗಳು ರೈತರಿಗೆ ಸಾಕ್ಷಿಯಾಗುತ್ತಿವೆ ಎನ್ನಬಹುದು.

ಹಾಗಾಗಿಯೇ ಹೆಸರಿನ ಹಂಗಿರದ, ಎದೆಬನಿಯ ಸೊಲ್ಲಾದ ನನ್ನದೂ ಆಗಬಲ್ಲ ನಿಮ್ಮದೂ ಆಗಬಲ್ಲ ಜನಪದ ಗೀತೆಗಳಿಗೆ ಮಳೆ ಎನ್ನುವುದು ಹಾಸುಹೊಕ್ಕು. ಹಳ್ಳಿಗರ ಮಣ್ಣಿನ ಸೊಗಡನ್ನು ಜನಪದ ಗೀತೆಗಳು ಸೂಸುತ್ತವೆ. ಮಣ್ಣಿಗೂ ಮಳೆಗೂ ಅವಿನಾಭಾವ ಸಂಬಂಧ... ಹಳ್ಳಿಗರೋ ಮಣ್ಣಿನ ಮಕ್ಕಳು. ಅವರ ಒಕ್ಕಲುತನದ ತುಂಬೆಲ್ಲಾ ಹುಟ್ಟಿ ನಲಿದ ಗೀತೆಗಳು ಬಾಯಿಂದ ಬಾಯಿಗೆ ಹರಿದಾಡುತ್ತಾ ಜನಪದ ಗೀತೆಗಳಾಗಿವೆ. ಜನಪದ ಗೀತೆಗಳೆಂದ ಮೇಲೆ ಅಲ್ಲಿ ಸಂಬಂಧಗಳ ಪ್ರಾಮುಖ್ಯ, ಒಕ್ಕಲುತನ ಮತ್ತು ಮಳೆಯ ಬಗ್ಗೆ ಪ್ರಸ್ತಾಪ ಇರಲೇಬೇಕು. ಜಾನಪದ ಗೀತೆಗಳು ಇಂದಿಗೂ ನಮ್ಮೊಳಗಿನ ಹಾಡು ಎನ್ನಿಸಲಿಕ್ಕೆ ಕಾರಣ ಹಳ್ಳಿಗಳ ಬಹುಪಾಲು ಜನ ತಮ್ಮ ಬದುಕಿಗಾಗಿ ಇಂದಿಗೂ ವ್ಯವಸಾಯವನ್ನೇ ಅವಲಂಬಿಸಿದ್ದಾರೆ. ಹಾಗಾಗಿ ಮಳೆ ಅವರ ಬದುಕಿನ ಅವಿಭಾಜ್ಯ ಅಂಗವೇ ಸರಿ.

ಮಳೆ ಬಂದರೆ ಹಬ್ಬದ ಸಂಭ್ರಮ ಮನೆಮಾಡುತ್ತದೆ. ಅಟ್ಟ ಸೇರಿದ ಕೊಡಲಿ, ಕೂರಿಗೆ, ಕುಡುಗೋಲುಗಳು ಹೊರಬರುತ್ತವೆ. ಹರಟೆ ಕಟ್ಟೆಗಳು ಖಾಲಿ ಖಾಲಿ. ಹಗಲ ಹೊತ್ತು ಊರೂ ಭಣಗುಡತೊಡಗುತ್ತದೆ. ನೆಲದೊಂದಿಗಿನ ಅನುಸಂಧಾನ ಹಾಡುವ ಕುಣಿಯುವ ಉಮ್ಮೇದಿಯನ್ನೂ ಹೊತ್ತು ತರುತ್ತದೆ.

'ಮಾಯದಂಥಾ ಮಳೆ ಬಂತಣ್ಣಾ
ಮದಗಾದ ಕೆರೆಗೆ...'

ಎಂದು ಹಾಡಿ ಕುಣಿಯುತ್ತಾರೆ. ಒರಟು ಹಸ್ತ ಪಾದಗಳಿಗೆ ಮಳೆಯ ತಂಪು... ಮಳೆಯೊಂದಿಗೆ ಸಂಭ್ರಮಿಸುತ್ತಾ ನೆನೆಯುತ್ತಲೇ ಹೊಲಕ್ಕೂ ಮನೆಗೂ ಓಡಾಡುತ್ತಾರೆ, ಹೊಲದ ಅಷ್ಟೂ ಕೆಲಸವನ್ನು ಮಾಡಿ ಮುಗಿಸುತ್ತಾರೆ.

ಸರಿಯಾದ ಸಮಯಕ್ಕೆ ಬಾರದ ಮಳೆಯನ್ನು
ಬೆ್ೖಯ್ಯುತ್ತಲೇ ಕೆನ್ನೆತಟ್ಟಿಕೊಂಡು,
'ಮಳೆಯಪ್ಪಾ ಮಳೆರಾಯ
ಕರೆಯುತಾರೋ ನಿನ್ನ
ಮೊದಲ ಕೂರಿಗೆ ರೈತರು
ಹೊಲದಾಗ ಬೆಳೆ ಬಿತ್ತಿ
ಕೈಯ್ಯಾ ಮುಗಿದಾರ...'

ಎಂದು ಮಳೆರಾಯನ ಮುಂದೆ ಮಂಡಿಯೂರುತ್ತಾರೆ. ಮಳೆಯೆಂದರೆ ಅವರ ಪಾಲಿಗೆ ದೇವರು. ಸಾಕ್ಷಾತ್ ಶಿವನ ಜಡೆಯಲ್ಲಿ ಕುಳಿತ ಗಂಗೆ, ಮಳೆರಾಯನೂ ಹೌದು.

ವಿಜಯ ರಾಘವೇಂದ್ರ ನಾಯಕ ನಟನಾಗಿ ಅಭಿನಯಿಸಿರುವ "ಸೇವಂತಿ' 'ಸೇವಂತಿ" ಚಲನಚಿತ್ರದಲ್ಲಿ ಬರುವ ನಿಂಬಿಯ ಬನಾದ ಮ್ಯಾಗಳ ಜನಪದ ಗೀತೆಯ ಈ ಹಾಡು:

ನಿಂಬಿಯಾ ಬನಾದ ಮ್ಯಾಗಳ
ಚಂದ್ರಾಮ ಚೆಂಡಾಡಿದ
ನಿಂಬಿಯಾ ಬನಾದ ಮ್ಯಾಗಳ
ಚಂದ್ರಾಮ ಚೆಂಡಾಡಿದ
ನಿಂಬಿಯಾ..... ಆ

ಕುನಾಲ್ ಗಾಂಜಾವಾಲ ಈ ಹಾಡನ್ನು ಸೇವಂತಿ ಸೇವಂತಿ ಸಿನಿಮಾದಲ್ಲಿ ಹಾಡಿರುತ್ತಾರೆ ಇನ್ನು ಕೆಲವರು ಜನಪದ ಧಾಟಿಯಲ್ಲಿ ಸ್ವರಚಿತ ಕವನಗಳನ್ನು ಪ್ರಚಾರ ಮಾಡುತ್ತಿರುವುದು ಸಂತಸದ ಸಂಗತಿ. ಯುವ ಮನಸ್ಸುಗಳು ಮೂಲ ಜನಪದ ಗೀತೆಗಳನ್ನು ಹೆಚ್ಚು ಹೆಚ್ಚು ಪ್ರಚಾರಕ್ಕೆ ತರಬೇಕು.

ಜನಪದ ಉಳಿಯಬೇಕಾದರೆ ಶಿಷ್ಯ ಪರಂಪರೆಯನ್ನು ಬೆಳೆಸಬೇಕು. ಜೀವನದಲ್ಲಿ ಸತ್ಯವನ್ನು ಪ್ರತಿಪಾದಿಸುವುದೇ ಜನಪದ ಸಾಹಿತ್ಯವಾಗದೆ.

ಜನಪದ ಶುದ್ಧ ಸಾಹಿತ್ಯ ಒಳಗೊಂಡಿದ್ದು, ಅದರ ಮೂಲ ಮಟ್ಟುಗಳು ಕೆಡದಂತೆ ಉಳಿಸಿಕೊಂಡು ಹೋಗುವುದು ಎಲ್ಲರ ಜವಾಬ್ದಾರಿ. ಜನಪದ ಕಾಯಕ ಸಾಹಿತ್ಯವಾಗಿದ್ದು, ಅದಕ್ಕೆ ವಾದ್ಯಗಳು ಬೇಕಿಲ್ಲ. ಗ್ರಾಮೀಣ ಬದುಕಿನ ನಿತ್ಯದ ಎಲ್ಲಾಕಾರ್ಯಗಳಲ್ಲಿಯೂ ಜನಪದ ಸಾಹಿತ್ಯ ಹಾಸುಹೊಕ್ಕಾಗಿದೆ. ಕೃತಕ ಕಲೆ ಕಲಿಯುವುದು ನಮ್ಮ ತನ ಕಳೆದುಕೊಂಡಂತೆ, ಗ್ರಾಮೀಣ ಪ್ರದೇಶದವರು ಹಾಡಿಲ್ಲದೇ ಕೆಲಸ ಮಾಡಲಾರರು. ಸುಮಾರು 400 ರಿಂದ 500 ಕ್ಕೂ ಹೆಚ್ಚು ಜನಪದ ಕಲೆಗಳಿದ್ದು, ಅದು ಗ್ರಾಮೀಣ ಪ್ರದೇಶದ ವೈವಿಧ್ಯತೆ ಎಂದೇ ಹೇಳಬಹುದು. ಆ ಕಲೆಯನ್ನು ಕಳೆದುಕೊಳ್ಳಬಾರದು. ಕಲೆಗಳು ಸಂಬಂಧವನ್ನು

ಬೆಸೆಯುತ್ತವೆ. ಯುವ ಸಮುದಾಯ ಆಸಕ್ತಿಯಿಂದ ಕಲೆಯನ್ನು ಕಲಿತು ಕಲೆ ಮೂಲಕ ಸಂಸ್ಕೃತಿ, ಸಮಾಜ ಉಳಿಸುವ ಕಾರ್ಯಮಾಡುವಂತಾಗಬೇಕು.

ಗ್ರಾಮೀಣ ಅನಕ್ಷರಸ್ಥ ಹೆಣ್ಣು ಮಕ್ಕಳಲ್ಲಿ ಬಹುದೊಡ್ಡ ಜನಪದ ಕಣಜವೇ ತುಂಬಿದೆ. ಅದನ್ನು ಉಳಿಸಿ ಬೆಳೆಸಿಕೊಂಡು ಹೋಗುವುದು, ಈಗ ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಗ್ರಾಮೀಣ ಪ್ರದೇಶದ ಅನಕ್ಷರಸ್ಥ ಜನರು ತಮ್ಮ ಬದುಕಿನ ರೀತಿ ನೀತಿಗಳು ಮತ್ತು ನಮ್ಮ ಆಚಾರ-ವಿಚಾರಗಳನ್ನೇ ಜಾನಪದ ಗೀತೆಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಬಾಯಿಂದ ಬಾಯಿಗೆ ಬಂದಿರುವ ಈ ಜಾನಪದ ಸಾಹಿತ್ಯವನ್ನು ಈಗ ಉಳಿಸಿಕೊಂಡು ಹೋಗುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

ಜಾನಪದ ಮೂಲತಃ ಪರಂಪರಾನುಗತವಾಗಿ ಬಂದ ಜ್ಞಾನ. ಇದು ಸಮಷ್ಟಿ ಕೃತವಾಗಿದೆ. ಎಲ್ಲಿಯವರಿಗೆ ಜಗತ್ತಿನಲ್ಲಿ ಸಾಮಾನ್ಯವರ್ಗ ಅಸ್ತಿತ್ವದಲ್ಲಿರುತ್ತದೆಯೋ ಅಲ್ಲಿಯತನಕ ಜಾನಪದ ತಾನೆ ತಾವಾಗಿ ಉಳಿದು ಬರುತ್ತದೆ. ಮನುಷ್ಯ ನಾಗರಿಕತೆಯಿಂದ ಮುಂದುವರೆದರೂ ಸಹ ಅವನ ಮೇಲೆ ಜಾನಪದ ಪ್ರಭಾವ ಸಾಕಷ್ಟಿರುತ್ತದೆ. ಇದು ಜೀವಂತ ಪಳಿಯುಳಿಕೆಯಾಗಬಲ್ಲದೆ, ಹೊರತೂ ನಶಿಸುವುದಿಲ್ಲ. ಯಾವುದಾದರೂ ರೂಪದಲ್ಲಿ ಮತ್ತೆ ಗರಿಗೆದರಿ ನಳನಳಿಸುತ್ತ ಜಾನಪದ ಒಂದಲ್ಲ ಒಂದು ರೀತಿಯಲ್ಲಿ ತಲೆ ಎತ್ತಿರುತ್ತದೆ.ಜಾನಪದಕ್ಕೆ ತನ್ನದೆ ಆದ ತೇಜಸ್ಸು ಹಾಗೂ ಪ್ರತಿಭೆಯನ್ನು ಹೊಂದಿರುತ್ತದೆ.

ಜಾನಪದ ಎಲ್ಲ ವರ್ಗಗಳಲ್ಲಿ ಕಂಡು ಬಂದರೂ ಅದು ಯಾವುದೇ ವರ್ಗಕ್ಕೆ, ಜಾತಿಗೆ, ಸೀಮಿತವಾದುದಲ್ಲ ಅದು ಎಲ್ಲರ ಮಧ್ಯ ಸರ್ವ ಸಾಧಾರಣವಾಗಿ ಇರುವಂತಹದು. ಕೆಲವು ಸಾಂದರ್ಭಿಕ ವ್ಯತ್ಯಾಸಗಳನ್ನು ಬಿಟ್ಟರೆ ಮಾನವರಲ್ಲಿ ಒಟ್ಟಾಗಿ ಅನುಸರಿಸುವ ಆಚರಿಸುವ, ನಡುವಳಿಕೆ ವಿಚಾರ ಆಚಾರಗಳಿವೆ. ಇವು ಜಾನಪದ ಒಳಗೊಂಡಿರುವ ಸರ್ವಸಾಮಾನ್ಯ ಅಂಶಗಳು ಹೀಗೆ ಜಾನಪದ ಸರ್ವಸಾಧಾರಣಾಗಿ ಎಲ್ಲರ ಬಳಕೆಯಾಗಿ ಉಳಿದು ಕೊಂಡಿದೆ.

**ಉಪಸಂಹಾರ**

ಶಿಷ್ಟ ಸಾಹಿತ್ಯಕ್ಕೆ ಜನಪದ ಮೂಲ ಬೇರು. ಗ್ರಾಮೀಣ ಭಾಗಗಳ ಜನರಲ್ಲಿ ಹಾಸು ಹೊಕ್ಕಾಗಿರುವ ಜಾನಪದ ಸಾಹಿತ್ಯ ನಗರದಲ್ಲಿ ನೇಪಥ್ಯಕ್ಕೆ ಸರಿದಿದೆ. ಕಲ್ಪನೆಗೆ ಹೊರತಾಗಿ ಬೀಸುವ, ಕುಟ್ಟುವ, ಹಂತಿ ಪದಗಳು, ಒಡಪುಗಳು, ಕೋಲಾಟ ಪದ ಸೇರಿದಂತೆ ರೈತ ಸಮುದಾಯ ತಮ್ಮ ಬದುಕು ಮತ್ತು ಕೃಷಿ ಚಟುವಟಿಕೆಗಳ ಸಂದರ್ಭಕ್ಕೆ ತಕ್ಕಂತೆ ಮೂಡಿ ಬಂದ ಹಾಡುಗಳೇ ಜಾನಪದ ಸಾಹಿತ್ಯವಾಗಿದೆ. ಗ್ರಾಮೀಣ ಜನರು ತಮ್ಮ ಮಕ್ಕಳಿಗೆ ಜನಪದವನ್ನು ಕಲಿಸುವ ಮೂಲಕ ಮುಂದಿನ ತಲೆಮಾರುಗಳಿಗೆ ಈ ಸಾಹಿತ್ಯವನ್ನು ಕೊಂಡೊಯ್ಯುತಿರುವುದು ಸಮಾಧಾನದ ಸಂಗತಿಯಾಗಿದೆ.

**ಪರಾಮರ್ಶನ ಗ್ರಂಥಗಳು**

1. ಡಾ. ಬರಗೂರು ರಾಮಚಂದ್ರಪ್ಪ; ಸಿನಿಮಾ ಒಂದು ಜನಪದ ಕಲೆ. (ಲೇಖನ)
2. ಜಯಲಕ್ಷ್ಮೀ ಸೀತಾಪುರ; ನಮ್ಮ ಸುತ್ತಿನ ಜನಪದ ಕಥನ ಗೀತೆಗಳು.
3. ಗವೀಶ ಹಿರೇಮಠ; ಜಾಗತೀಕರಣ ಮತ್ತು ಜಾನಪದ.
4. https://sahityasudhe.blogspot.com
5. ಡಾ. ಹಾ.ಮ.ನಾಯಕ; ಜಾನಪದ ಸ್ವರೂಪ